ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಶ್ರೀರಂಗಪಟ್ಟಣ

ಸಿಸಿಃ ನಂಃ **1112/2021**

ಪಿ.ಡಬ್ಲ್ಯೂಃ **07**

ಸಿ.ಡಬ್ಲ್ಯೂಃ **07**

| | |
|---|---|
| ಸಾಕ್ಷಿಯ ಹೆಸರು | ಕೆ.ಎಂ.ರಮೇಶ |
| ತಂದೆ/ಗಂಡನ ಹೆಸರು | ಲೇ. ಮಾದಯ್ಯ |
| ವಯಸ್ಸು | 52 ವರ್ಷ |
| ಉದ್ಯೋಗ | ಸಂಚಾರಿ ನಿಯಂತ್ರಕರು, ಶ್ರೀರಂಗಪಟ್ಟಣ |
| ವಿಳಾಸ | ಕೊತ್ತತ್ತಿ |

ಸಾಕ್ಷಿಗೆ ದಿನಾಂಕ **13.11.2025** ರಂದು ಪ್ರಮಾಣವಚನ ನೀಡಲಾಯಿತು.

ಮುಖ್ಯ ವಿಚಾರಣೆ ಃ ಮಾನ್ಯ ಸ ಸ ಅ ರವರಿಂದಃ

ನಾನು **2018** ರಿಂದ ಇಲ್ಲಿಯವರೆಗೆ ನಾನು ಶ್ರೀರಂಗಪಟ್ಟಣ ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣದಲ್ಲಿ ಸಂಚಾರಿ ನಿಯಂತ್ರಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿ. **02.04.2021** ರಂದು ನಾನು ನಿಯಂತ್ರಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದು ಸಂಜೆ **6.15** ಗಂಟೆ ಸಮಯದಲ್ಲಿ ನಮ್ಮ ಘಟಕ ವ್ಯವಸ್ಥಾಪಕರು ದೂರವಾಣಿ ಕರೆಮಾಡಿ ಮದ್ದೂರು ಡಿಪೋ ಕೆಎ**-11-**ಎಫ್**-0414** ಕೆ.ಎಸ್.ಆರ್.ಟಿ.ಸಿ ಬಸ್ ವಿನಾಯಕ ವೈನ್ ಸ್ಟೋರ್, ಮೈ-ಬೆಂಗಳೂರು ಹೆದ್ದಾರಿಯಲ್ಲಿ ಶ್ರೀರಂಗಪಟ್ಟಣಕ್ಕೆ ಬರುವಾಗ ಅಪಘಾತವಾಗಿರುತ್ತದೆ ಎಂದು ತಿಳಿಸಿದ್ದು ನಾನು ಸ್ಥಳಕ್ಕೆ ಹೋಗಿರುತ್ತೇನೆ. ನಾನು ಸ್ಥಳಕ್ಕೆ ಹೋದಾಗ ಪೋಲಿಸರು ಅಪಘಾತಕ್ಕೆ ಒಳಗಾದ ವಾಹನಗಳನ್ನು ತೆಗೆದುಕೊಂಡು ಹೋಗಿದ್ದರು. ನಾವು ಪೋಲಿಸ್ ಠಾಣೆಗೆ ಹೋಗಿ ವಿಚಾರಣೆ ಮಾಡಲಾಗಿ ಅಮಾನತ್ತುಪಡಿಸಿಕೊಂಡ ಬಗ್ಗೆ ತಿಳಿಸಿರುತ್ತಾರೆ. ದಿ.**03.04.2021** ರಂದು ಘಟಕ ವ್ಯವಸ್ಥಾಪಕರು ಅಧಿಕಾರ ಪತ್ರ ನೀಡಿ ವಾಹನವನ್ನು ಮಧ್ಯಂತರ ವಶಕ್ಕೆ ಪಡೆಯುವಂತೆ ಸೂಚಿಸಿರುತ್ತಾರೆ. ಅದರಂತೆ ನಾನು ಪೋಲಿಸರು ನೀಡಿದ **133** ನೋಟೀಸ್ ಪಡೆದುಕೊಂಡು ಪ್ರತ್ಯುತ್ತರ ನೀಡಿ ವಾಹನಕ್ಕೆ ಸಂಬಂಧಪಟ್ಟ ದಾಖಲಾತಿ, ಚಾಲಕರ ಮಾರ್ಗಪತ್ರ, ಕರ್ತವ್ಯ ದೃಡೀಕರಣ ಪತ್ರವನ್ನು ಪ್ರತ್ಯುತ್ತರ ಜೊತೆ ನೀಡಿದ್ದು, ನಷ್ಟಭರ್ತಿ ಬಾಂಡ್ ನೀಡಿ ಮೇಲ್ಕಂಡ ಕೆ.ಎಸ್.ಆರ್.ಟಿ.ಸಿ ಬಸ್ಸನ್ನು ವಶಕ್ಕೆ ಪಡೆದುಕೊಂಡಿರುತ್ತೇನೆ.

ಸ್ಥಳದಲ್ಲಿ ನನ್ನ ಹಾಜರಾತಿಯಲ್ಲಿ ಬಸ್ ನ ಛಾಯಚಿತ್ರ ತೆಗೆದಿರುತ್ತಾರೆ.

ಸಾಕ್ಷಿಗೆ ನಿಪಿ 4 ಮತ್ತು 5 ನ್ನು ತೋರಿಸಲಾಗಿ ಸಾಕ್ಷಿ ಅದರಲ್ಲಿರುವ ಬಸ್ ನ ಛಾಯಚಿತ್ರವನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ಘಟಕ ವ್ಯವಸ್ಥಾಪಕರು ನೀಡಿದ ಅಧಿಕಾರ ಪತ್ರವನ್ನು ನೋಡಿ ಗುರುತಿಸಿದ್ದು ನಿಪಿ 9 ಎಂದು, ಸಾಕ್ಷಿಯ 2 ಸಹಿಗಳನ್ನು ಒಟ್ಟಾರೆಯಾಗಿ ನಿಪಿ 9 ಎ ಎಂದು ಗುರುತಿಸಲಾಯಿತು. ಸಾಕ್ಷಿಗೆ ಕಲಂ 133 ನೋಟೀಸನ್ನು ತೋರಿಸಲಾಗಿ ಸಾಕ್ಷಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ನೋಟೀಸನ್ನು ನಿಪಿ 10 ಎಂದು, ಸಾಕ್ಷಿಯ ಸಹಿಯನ್ನು ನಿಪಿ 10 ಎ ಎಂದು ಗುರುತಿಸಲಾಯಿತು. ಸಾಕ್ಷಿಗೆ ಪ್ರತ್ಯುತ್ತರವನ್ನು ತೋರಿಸಲಾಗಿ ನಿಪಿ 11 ಎಂದು, ಸಾಕ್ಷಿಯ ಸಹಿಯನ್ನು ನಿಪಿ 11 ಎ ಎಂದು ಗುರುತಿಸಲಾಯಿತು. ಇಂಡಿಮಿನಿಟಿ ಬಾಂಡನ್ನು ನಿಪಿ 12 ಎಂದು, ಸಾಕ್ಷಿಯ ಸಹಿಯನ್ನು ನಿಪಿ 12 ಎ ಎಂದು ಗುರುತಿಸಲಾಯಿತು.

ಆರೋಪಿಪರ ವಕೀಲರು ಹಾಜರಿದ್ದು ಪಾಟೀಸವಾಲು ಇಲ್ಲ ಎಂದು ಗುರುತಿಸಲಾಯಿತು.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ
ಶ್ರೀರಂಗಪಟ್ಟಣ